A/2023

DSERT/SSKP/TRG/12/2023-TECD

ಕರ್ನಾಟಕ ಸರ್ಕಾರ Government of Karnataka

ಡಿಎಸ್‌ಇಆರ್‌ಟಿ DSERT

ರಾಜ್ಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಇಲಾಖೆ
DEPARTMENT OF STATE EDUCATIONAL RESEARCH AND TRAINING
No 4, 100 FT RING ROAD, BANASHANKARI 3 RD STAGE BENGALURU - 560 085
Email: dpi.dsert-ka@nic.in Website: http://dsert.kar.nic.in

Phone - 080 26980100
Fax - 080 26422377

DSERT/SSKP/TRG/12/2023-TECD
ದಿನಾಂಕ:21/09/2023

## ಜ್ಞಾಪನ

**ವಿಷಯ :** 2023-24ನೇ ಸಾಲಿನಲ್ಲಿ ರಾಜ್ಯಪಠ್ಯಕ್ರಮ ಅನುಸರಿಸುತ್ತಿರುವ ಸರ್ಕಾರಿ, ಅನುದಾನಿತ ಪ್ರಾಥಮಿಕ, ಉನ್ನತೀಕರಿಸಿದ ಮತ್ತು ಪ್ರೌಢ ಶಾಲಾ ಶಿಕ್ಷಕರಿಗೆ "ಗಣಿತ ಕಲಿಕಾ ಆಂದೋಲನ" ಆನ್‌ಲೈನ್ ತರಬೇತಿ ನೀಡಲು ಅಗತ್ಯ ಕ್ರಮ ವಹಿಸುವ ಬಗ್ಗೆ

**ಉಲ್ಲೇಖ :** "ಗಣಿತ ಕಲಿಕಾ ಆಂದೋಲನ"ದ ಕುರಿತಾಗಿ ಅಕ್ಷರ ಫೌಂಡೇಶನ್ ರವರ ಇ-ಮೇಲ್ ದಿನಾಂಕ?0-09-2023 (Reference)

**********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ 2023-24ನೇ ಸಾಲಿನಲ್ಲಿ,ಪ್ರಾಥಮಿಕ ಶಾಲೆ, ಉನ್ನತೀಕರಿಸಿದ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಗಣಿತ ಬೋಧಿಸುತ್ತಿರುವ ಶಿಕ್ಷಕರಿಗೆ "ಗಣಿತ ಕಲಿಕಾ ಆಂದೋಲನ" ಆನ್‌ಲೈನ್ ತರಬೇತಿ ನೀಡಲು ಅಗತ್ಯ ಕ್ರಮವಹಿಸುವ ಕುರಿತು ಪ್ರತಿ ಜಿಲ್ಲೆಯ ನೋಡಲ್ ಅಧಿಕಾರಿಗಳು, ತಾಂತ್ರಿಕ ಸಹಾಯಕರು ಮತ್ತು ಟಾಲ್ಪ್ ಸಂಪನ್ಮೂಲ ವ್ಯಕ್ತಿಗಳ ಸಭೆ ನಡೆಸಿ, 2023-24ನೇ ಸಾಲಿನ ಕಾರ್ಯಚಟುವಟಿಕೆಗಳನ್ನು ಅನುಷ್ಠಾನಗೊಳಿಸಬೇಕಿದೆ.

ರಾಜ್ಯಪಠ್ಯಕ್ರಮ ಅನುಸರಿಸುತ್ತಿರುವ ಸರ್ಕಾರಿ, ಅನುದಾನಿತ ಪ್ರಾಥಮಿಕ ಶಾಲೆಗಳ ಎಲ್ಲಾ ಶಿಕ್ಷಕರು, ಉನ್ನತೀಕರಿಸಿದ ಪ್ರಾಥಮಿಕ ಶಾಲೆಗಳಲ್ಲಿ 1 ರಿಂದ 5ನೇ ತರಗತಿಗೆ ಬೋಧಿಸುತ್ತಿರುವ ಎಲ್ಲಾ ಶಿಕ್ಷಕರು ಮತ್ತು 6-8 ನೇ ತರಗತಿಗಳಿಗೆ ಗಣಿತ ವಿಷಯ ಬೋಧಿಸುತ್ತಿರುವ ಶಿಕ್ಷಕರು ಹಾಗೂ ಪ್ರೌಢಶಾಲೆಗಳಲ್ಲಿ ಗಣಿತ ವಿಷಯ ಬೋಧಿಸುತ್ತಿರುವ ಶಿಕ್ಷಕರು ಈ ಆನ್ ಲೈನ್ ತರಬೇತಿಯನ್ನು ಪೂರ್ಣಗೊಳಿಸಬೇಕಿದೆ. ಇನ್ನುಳಿದ ಇತರ ಸ್ವ ಆಸಕ್ತ ಶಾಲಾ ಶಿಕ್ಷಕರು ಸೇರಿದಂತೆ ದೀಕ್ಷಾ ಪೋರ್ಟಲ್ ಮೂಲಕ ಎಸ್.ಎಸ್.ಓ ಅಥವಾ ಸೈನ್ ಇನ್ ವಿತ್ ಗೂಗಲ್ ಮೂಲಕ ಆನ್‌ಲೈನ್ ತರಬೇತಿಯನ್ನು ಪಡೆಯಲು ಸೂಚಿಸಿದೆ. ರಾಜ್ಯ ಹಂತದಿಂದ ಕೋರ್ಸ್ ಲಾಂಚ್ ಮಾಡಲಾಗಿದೆ. ಈ ತರಬೇತಿ ಕೋರ್ಸ್ ಬುನಾದಿ ಗಣಿತದ ಪರಿಕಲ್ಪನೆಯನ್ನು ಒಳಗೊಂಡಿದ್ದು ಅಂತರ್‌ಕ್ರಿಯಾತ್ಮಕ ಸ್ವರೂಪದ್ದಾಗಿದೆ. ಕಲಿವಿನ ಫಲ ಮತ್ತು ಸಾಮರ್ಥ್ಯಾಧಾರಿತವಾದ ಈ ಮಾಡ್ಯೂಲ್ ಶಿಕ್ಷಕರ ಕೌಶಲಗಳಿಗೆ ಪುನರ್ಬಲನವನ್ನು ಒದಗಿಸುತ್ತಿದೆ.

ಈ ಕೋರ್ಸ್ ಗಣಿತ ವಿಷಯದ ಕುರಿತಾಗಿರುವುದರಿಂದ 8-10ನೇ ತರಗತಿಗೆ ಗಣಿತ ವಿಷಯ ಬೋಧಿಸುತ್ತಿರುವ ಶಿಕ್ಷಕರು ಸೇತುಬಂಧ ಮತ್ತು ಹಾಗೂ ಪೂರ್ವಸಿದ್ಧತಾ ಚಟುವಟಿಕೆಗಳಿಗಾಗಿ ಸಂಬಂಧಿಸಿದ ವಿಷಯಾಂಶಗಳಿಗೆ ಪೂರಕವಾಗಿರುವುದರಿಂದ ಈ ಆನ್‌ಲೈನ್ ತರಬೇತಿ ಕೋರ್ಸ್‌ಗೆ ನೊಂದಣಿಯಾಗಿ ಕೋರ್ಸ್ ಪೂರ್ಣಗೊಳಿಸಿ, ಇದರ ಸದುಪಯೋಗವನ್ನು ತರಗತಿ ಕೋಣೆಯಲ್ಲಿ ಅಳವಡಿಸುವುದು. ಕೋರ್ಸ್‌ನ್ನು ಕನ್ನಡದಲ್ಲಿ ಅರ್ಥೈಸಿಕೊಂಡು ತರಬೇತಿ ಪಡೆಯಬಹುದಾದ ಶಿಕ್ಷಕರು ಸಹ ಈ ಕೋರ್ಸ್‌ಗೆ ಲಾಗಿನ್ ಆಗಬಹುದಾಗಿದೆ. ಇದು ಅತ್ಯಂತ ಮಹತ್ವವಾದ ತರಬೇತಿ ಕಾರ್ಯಕ್ರಮವಾಗಿದ್ದು,ರಾಜ್ಯದ ಎಲ್ಲಾ ಡಯಟ್‌ಗಳು ಅಗತ್ಯ ಪೂರ್ವಸಿದ್ಧತೆಯೊಂದಿಗೆ ಯೋಜಿಸಿ ಸದರಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವುದು. ಈ ತರಬೇತಿಯನ್ನು ಆನ್‌ಲೈನ್‌ನಲ್ಲಿ ಶೂನ್ಯ ಬಜೆಟ್ ಚಟುವಟಿಕೆಯಡಿಯಲ್ಲಿ ನೀಡಲಾಗುತ್ತಿದೆ.

2023-24ನೇ ಸಾಲಿನಲ್ಲಿ ಸರ್ಕಾರಿ ಶಾಲಾ ಶಿಕ್ಷಕರಿಗೆ ಗಣಿತ ಕಲಿಕಾ ಆಂದೋಲನಾ ತರಬೇತಿ ಕೋರ್ಸ್ (ಪ್ರಾಥಮಿಕ ಮತ್ತು ಪ್ರೌಢ ಶಾಲಾ ಶಿಕ್ಷಕರಿಗೆ) ಶಿಕ್ಷಕರಿಗಾಗಿ ಆನ್‌ಲೈನ್ ತರಬೇತಿ ಕೋರ್ಸ್‌ಗಳನ್ನು ನಿಗದಿಪಡಿಸಲಾಗಿದ್ದು, ಈ ತರಬೇತಿಯನ್ನು ಎಲ್ಲಾ ಶಿಕ್ಷಕರು ಪಡೆದುಕೊಳ್ಳಲು ತಿಳಿಸಿದೆ. ಕೋರ್ಸ್‌ಗಳ ವಿವರ ಈ ಕೆಳಕಂಡಂತಿದೆ.

| ಕ್ರ ಸಂ. | ಕೋರ್ಸ್‌ಗಳ ಸಂಖ್ಯೆ ಮತ್ತು ವಿವರ | ಕೋರ್ಸ್‌ಗಳ ಲಿಂಕ್ |
|---|---|---|
| 01 | KA_GKA_GC_175_ಗಣಿತ ಕಲಿಕಾ ಆಂದೋಲನ ಶಿಕ್ಷಕರಿಗಾಗಿ | https://diksha.gov.in/explore-course/course/do_3138474409631252481949 |

Scanned with OKEN Scanner

| | | | |
|---|---|---|---|
| | | ತರಬೇತಿ ಕೋರ್ಸ್ | |

ಈ ತರಬೇತಿಯು 30/11/2023 ರವರೆಗೆ ಆನ್‌ಲೈನ್ (DIKSHA app) ನಲ್ಲಿ ಲಭ್ಯವಾಗಲಿದೆ. ಸದರಿ ಉಲ್ಲೇಖಿತ ಶಿಕ್ಷಕರುಗಳು ತರಬೇತಿ ಪಡೆಯಲು ಅಗತ್ಯ ಬೆಂಬಲ ಮತ್ತು ಮಾರ್ಗದರ್ಶನ ನೀಡಿ ಕ್ರಮವಹಿಸಲು ಡಯಟ್‌ಗಳಿಗೆ ಸೂಚಿಸಿದೆ. ಇದಕ್ಕಾಗಿ ಡಯಟ್ ಹಂತದಲ್ಲಿ ಒಬ್ಬರು ನೋಡಲ್ ಅಧಿಕಾರಿಯವರನ್ನು ನೇಮಿಸಿಕೊಳ್ಳುವುದು, ಹಾಗೂ ಪ್ರತಿ ಮಾಹೆ ಸದರಿ ಕಾರ್ಯಕ್ರಮದ ಪ್ರಗತಿಯನ್ನು ಪರಿಶೀಲಿಸಿ ನಿಗದಿತ ಗುರಿಸಾಧಿಸಲು ಬ್ಲಾಕ್ ಹಂತದ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ ಮಾರ್ಗದರ್ಶನ ನೀಡಲು ತಿಳಿಸಿದೆ.

Signed by
V Sumangala
Date: 22-09-2023 16:35:35
ನಿರ್ದೇಶಕರು
ಡಿ.ಎಸ್.ಇ.ಆರ್.ಟಿ.
ಬೆಂಗಳೂರು

ಗೆ,

ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ) ಮತ್ತು ಉಪನಿರ್ದೇಶಕರು(ಅಭಿವೃದ್ಧಿ) ರವರಿಗೆ ಮತ್ತು ತತ್ಸಮಾನ ವೃಂದದ ಅಧಿಕಾರಿಗಳಿಗೆ ಅಗತ್ಯ ಕ್ರಮಕ್ಕಾಗಿ.

ಪ್ರತಿಯನ್ನು,

1.ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪ್ರಾಥಮಿಕ & ಪ್ರೌಢ ಶಿಕ್ಷಣ) ಬಹುಮಹಡಿಗಳ ಕಟ್ಟಡ, ಬೆಂಗಳೂರುರವರಿಗೆ ಗೌರವಪೂರ್ವಕವಾಗಿ ಮಾಹಿತಿಗಾಗಿ ಸಲ್ಲಿಸಿದೆ.

2.ಮಾನ್ಯ ಆಯುಕ್ತರು, ಶಾ.ಶಿ.ಇ. ನೃಪತುಂಗ ರಸ್ತೆ, ಬೆಂಗಳೂರು ರವರಿಗೆ ಗೌರವಪೂರ್ವಕವಾಗಿ ಮಾಹಿತಿಗಾಗಿ ಸಲ್ಲಿಸಿದೆ.

3.ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ರವರಿಗೆ ಗೌರವಪೂರ್ವಕವಾಗಿ ಮಾಹಿತಿಗಾಗಿ ಸಲ್ಲಿಸಿದೆ.

4.ಅಪರ ಆಯುಕ್ತರು, ಧಾರವಾಡ ಮತ್ತು ಕಲಬುರಗಿ ವಿಭಾಗದವರಿಗೆ, ಗೌರವಪೂರ್ವಕವಾಗಿ ಮಾಹಿತಿಗಾಗಿ ಸಲ್ಲಿಸಿದೆ.

5. ಅಕ್ಷರ ಫೌಂಡೇಷನ್ ರವರಿಗೆ ಮಾಹಿತಿಗಾಗಿ.

5.ಕಚೇರಿ ಪ್ರತಿ.

Scanned with OKEN S

ಕರ್ನಾಟಕ ಸರ್ಕಾರ
ಶಾಲಾ ಶಿಕ್ಷಣ ಇಲಾಖೆ

# ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಹಾವೇರಿ

ಕರ್ಜಗಿ ರಸ್ತೆ, E-mail ID – haveridiet@gmail.com, Web – diethaveri.com Phone : 08375-297240

ಸಂಖ್ಯೆ:ಇ1/ಗ.ಕ.ಆಂ/ಆ.ತ/ಕೋ.ಪೂ.ಕು//2023-24 ದಿನಾಂಕ: 26/09/2023

:ಜ್ಞಾಪನಾ:

ವಿಷಯ: 2023-24 ನೇ ಸಾಲಿನಲ್ಲಿ ರಾಜ್ಯ ಪಠ್ಯಕ್ರಮ ಅನುಸರಿಸುತ್ತಿರುವ ಸರ್ಕಾರಿ, ಅನುದಾನಿತ ಪ್ರಾಥಮಿಕ, ಉನ್ನತ್ತೀಕರಿಸಿದ ಮತ್ತು ಪ್ರೌಢಶಾಲಾ ಶಿಕ್ಷಕರಿಗೆ "ಗಣಿತ ಕಲಿಕಾ ಆಂದೋಲನ" ಆನ್‌ಲೈನ್ ತರಬೇತಿಯನ್ನು ಪೂರೈಸುವ ಕುರಿತು.

ಉಲ್ಲೇಖ: ಮಾನ್ಯ ನಿರ್ದೇಶಕರು, ಡಿ.ಎಸ್.ಇ.ಆರ್.ಟಿ, ಬೆಂಗಳೂರು ಇವರ ಕಚೇರಿ ಜ್ಞಾಪನ ಪತ್ರ ಸಂಖ್ಯೆ: DSERT/SSKP/TRG/12/2023-TECD. ದಿನಾಂಕ:21-09-2023

************

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, 2023-24 ನೇ ಸಾಲಿನಲ್ಲಿ ರಾಜ್ಯ ಪಠ್ಯಕ್ರಮ ಅನುಸರಿಸುತ್ತಿರುವ ಸರ್ಕಾರಿ, ಅನುದಾನಿತ ಪ್ರಾಥಮಿಕ, ಉನ್ನತ್ತೀಕರಿಸಿದ ಮತ್ತು ಪ್ರೌಢಶಾಲಾ ಶಿಕ್ಷಕರಿಗೆ "ಗಣಿತ ಕಲಿಕಾ ಆಂದೋಲನ" ಆನ್‌ಲೈನ್ ತರಬೇತಿಯನ್ನು ಹಮ್ಮಿಕೊಳ್ಳಲಾಗಿದ್ದು, 1ರಿಂದ 5 ನೇ ತರಗತಿ ಬೋಧಿಸುವ ಎಲ್ಲಾ ಶಿಕ್ಷಕರು ಹಾಗೂ 6 ರಿಂದ 10 ನೇ ತರಗತಿ ಗಣಿತ ಬೋಧಿಸುವ ಶಿಕ್ಷಕರು ಈ ತರಬೇತಿ ಕೋರ್ಸನ್ನು ದೀಕ್ಷಾ ಆಪ್ ಮೂಲಕ ಪಡೆಯಲು ತಮ್ಮ ತಾಲ್ಲೂಕಿನ ಶಿಕ್ಷಕರಿಗೆ ಮಾಹಿತಿ ನೀಡಲು ಸೂಚಿಸಿದೆ. ಈ ತರಬೇತಿ ಕೋರ್ಸ್ 30-11-2023 ರವರೆಗೆ ಆನ್‌ಲೈನ್ ಕೋರ್ಸ್ ದೀಕ್ಷಾ ಆಪ್‌ನಲ್ಲಿ ಲಭ್ಯವಿದ್ದು ನಿಗದಿತ ದಿನಾಂಕದೊಳಗೆ ಕೋರ್ಸ್ ಪೂರ್ಣಗೊಳಿಸಲು ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಿದೆ.

ಕೋರ್ಸ್‌ಲಿಂಕ್– https://diksha.gov.in/explore-course/course/do_3138474409631252481949

29/9/23

ಉಪನಿರ್ದೇಶಕರು (ಅಭಿವೃದ್ಧಿ) ಹಾಗೂ ಪ್ರಾಂಶುಪಾಲರು
ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಹಾವೇರಿ.

ಗೆ,

- ಮಾನ್ಯ ಉಪನಿರ್ದೇಶಕರು (ಆ), ಶಾಲಾ ಶಿಕ್ಷಣ, ಇಲಾಖೆ, ಹಾವೇರಿ
- ತಾಲ್ಲೂಕಿನ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಕ್ಷೇತ್ರ ಸಮನ್ವಯಾಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ

<u>ಪ್ರತಿಯನ್ನು ಮಾಹಿತಿಗಾಗಿ ಗೌರವಗಳೊಂದಿಗೆ</u>
ಮಾನ್ಯ ನಿರ್ದೇಶಕರು, ಡಿ.ಎಸ್.ಇ.ಆರ್.ಟಿ. ಬೆಂಗಳೂರು ಇವರಿಗೆ

Scanned with OKEN Scanner